ತಂತಿ ವಿಳಾಸ ಯೂನಿರಜ್
ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/377/2019-20

ದಿನಾಂಕ 20-07-2020

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 18-06-2020ರಂದು ನಡೆದ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ 18-06-2020ರಂದು ಗುರುವಾರ ಬೆಳಿಗ್ಗೆ 11-30 ಗಂಟೆಗೆ, ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ಹೇಳಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ, ಆದುದರಿಂದ. ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 10-08-2020ರ ಒಳಗಾಗಿ, ಉಪಕುಲಸಚಿವರು, ಸಿಂಡಿಕೇಟ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

Lingaraju 20/7/2020

ಉಪಕುಲಸಚಿವರು(ಪ್ರಾಧಿಕಾರ)

ಪ್ರತಿ:

1. ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಉಪಕುಲಸಚಿವರು, ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರೀಕ್ಷಾಂಗ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಸಹಾಯಕ ಕುಲಸಚಿವರು, ಶೈಕ್ಷಣಿಕ/ಆಡಳಿತ/ಸಾಮಾನ್ಯ/ಪರೀಕ್ಷಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಛೇರಿ ಪ್ರತಿ.

**AC Forwarding letter**

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ದಿನಾಂಕ: 18-06-2020 ರಂದು ಗುರುವಾರ ಪೂರ್ವಾಹ್ನ 11.30 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡವಳಿಗಳು.

<u>ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು</u>

| | | |
|---|---|---|
| 1. | ಪ್ರೊ. ಜಿ.ಹೇಮಂತ ಕುಮಾರ್, ಕುಲಪತಿಗಳು | ಅಧ್ಯಕ್ಷರು |
| 2 | ಶ್ರೀ. ಶಾಂತಕುಮಾರ್.ಕೆ | ಸದಸ್ಯರು |
| 3. | ಡಾ. ಪಿ.ಎಸ್.ಸುರೇಶ್ | ಸದಸ್ಯರು |
| 4. | ಡಾ. ಎಂ.ಪ್ರೀತಿ | ಸದಸ್ಯರು |
| 5. | ಡಾ. ಕೆ.ಕೆ.ವಿಶಾಲಾಕ್ಷಿ | ಸದಸ್ಯರು |
| 6. | ಡಾ. ನಾಗರಾಜು | ಸದಸ್ಯರು |
| 7. | ಶ್ರೀ. ದಿನೇಶ್ ಎಂ. ಗಾಂವ್‌ಕರ್ | ಸದಸ್ಯರು |
| 8. | ಡಾ. ಬಿ. ಎನ್. ಆಶಾ | ಸದಸ್ಯರು |
| 9. | ಡಾ. ಎಂ. ಶಾರದ | ಸದಸ್ಯರು |
| 10. | ಪ್ರೊ. ಎನ್. ಎಂ. ತಳವಾರ್ | ಸದಸ್ಯರು |
| 11. | ಪ್ರೊ. ಹೆಚ್.ಟಿ.ಬಸವರಾಜಪ್ಪ | ಸದಸ್ಯರು |
| 12. | ಪ್ರೊ. ಡಿ.ಆನಂದ್ | ಸದಸ್ಯರು |
| 13. | ಪ್ರೊ. ಶಿವಬಸವಯ್ಯ | ಸದಸ್ಯರು |
| 14. | ಪ್ರೊ. ಬಿ.ಎಸ್.ವಿಶ್ವನಾಥ್ | ಸದಸ್ಯರು |
| 15. | ಪ್ರೊ. ರಮೇಶ್ | ಸದಸ್ಯರು |
| 16 | ಪ್ರೊ. ನಿಂಗಮ್ಮ ಸಿ. ಬೆಟ್ಸೂರ್ | ಸದಸ್ಯರು |
| 17. | ಶ್ರೀ. ರಘು.ಸಿ.ಎಸ್ | ಸದಸ್ಯರು |
| 18. | ಶ್ರೀ. ಬೆಳವಾಡಿ ಪ್ರಭಾಕರ್ | ಸದಸ್ಯರು |
| 19. | ಡಾ. ಪಿ.ಸರಸ್ವತಿ, ಗ್ರಂಥಪಾಲಕರು (ಪ್ರಭಾರ) | ಸದಸ್ಯರು |
| 20. | ಡಾ.ಎಸ್.ಟಿ. ರಾಮಚಂದ್ರ. ನಿರ್ದೇಶಕರು, (ಪ್ರಭಾರ) ವಿದ್ಯಾರ್ಥಿ ಕ್ಷೇಮಪಾಲನ | ಸದಸ್ಯರು |
| 21. | ಪ್ರೊ. ಎನ್.ಕೆ. ಲೋಕನಾಥ್, ನಿರ್ದೇಶಕರು, ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ | ಸದಸ್ಯರು |
| 22. | ಡಾ. ಎಸ್.ಶ್ರೀಕಂಠಸ್ವಾಮಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ | ಸದಸ್ಯರು |
| 23. | ಡಾ. ಪಿ.ಕೃಷ್ಣಯ್ಯ, ನಿರ್ದೇಶಕರು, (ಪ್ರಭಾರ) ದೈಹಿಕ ಶಿಕ್ಷಣ ವಿಭಾಗ | ಸದಸ್ಯರು |
| 24. | ಪ್ರೊ. ಕೆ.ಎಂ.ಮಹದೇವನ್, ಕುಲಸಚಿವ (ಪರೀಕ್ಷಾಂಗ) | ಸದಸ್ಯರು |
| 22. | ಪ್ರೊ. ಟಿ.ಎಸ್.ದೇವರಾಜು, ಹಣಕಾಸು ಅಧಿಕಾರಿ | ಸದಸ್ಯರು |
| 23. | ಪ್ರೊ. ಶಿವಪ್ಪ.ಆರ್, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

<u>ವಿಶೇಷ ಆಹ್ವಾನಿತರು</u>

1. ಪ್ರೊ. ಜಿ.ವೆಂಕಟೇಶ್‌ಕುಮಾರ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ

ಸಭೆಗೆ ಹಾಜರಾಗದವರು

1. ಶ್ರೀ ಮುಗೇಶಪ್ಪ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,ಮೈಸೂರು.
2. ಆಯುಕ್ತರು, ತಾಂತ್ರಿಕ ಶಿಕ್ಷಣ ಇಲಾಖೆ,ಕರ್ನಾಟಕ ಸರ್ಕಾರ, ಬೆಂಗಳೂರು.
3. ಶ್ರೀ. ಕೆ.ಟಿ.ಶ್ರೀಕಂಠೇಗೌಡ, ವಿಧಾನ ಪರಿಷತ್ ಸದಸ್ಯರು
4. ಡಾ. ವಿ. ಶಿವಪ್ರಸಾದ್
5. ಶ್ರೀ ಕೆ.ಟಿ. ಕೃಷ್ಣೇಗೌಡ
6. ಪ್ರೊ.. ಎಸ್.ಆರ್. ನಿರಂಜನ್

ಮೊದಲಿಗೆ, ಮಾನ್ಯ ಕುಲಪತಿಗಳು ಮಾತನಾಡುತ್ತಾ ಎಲ್ಲಾ ಸದಸ್ಯರನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸ್ವಾಗತಿಸಿ, ದಿನಾಂಕ 27-03-2020ರಂದು ಏರ್ಪಡಿಸಿದ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಯನ್ನು ಸರ್ಕಾರದ ಸುತ್ತೋಲೆ ಅನ್ವಯ ಕೋವಿಡ್-19 ವೈರಸ್ ತಡೆಗಟ್ಟುವ ಹಿನ್ನೆಲೆಯಲ್ಲಿ ಸದರಿ ಸಭೆಯನ್ನು ಮುಂದೂಡಲಾಗಿತ್ತು, ಮುಂದೂಡಲಾಗಿದ್ದ ಸಭೆಯನ್ನು ಇಂದು ಏರ್ಪಡಿಲಾಗಿದೆ ಎಂದು ತಿಳಿಸಿದರು.

ನಂತರ ಕುಲಸಚಿವರು ಮಾತನಾಡಿ ಇತ್ತೀಚೆಗೆ ನಿಧನರಾದ ಕರ್ನಾಟಕದ ಘನತೆವೆತ್ತ ಮಾಜಿ ರಾಜ್ಯಪಾಲರು ಹಾಗೂ ವಿಶ್ವವಿದ್ಯಾನಿಲಯಗಳ ಕುಲಾಧಿಪತಿಗಳಾದ (1) ಶ್ರೀ ಟಿ.ಎನ್. ಚರ್ತುವೇದಿ (2) ಕೇಂದ್ರ ಸರ್ಕಾರದ ಮಾಜಿ ಕಾನೂನು ಸಚಿವರು, ಕರ್ನಾಟಕ ರಾಜ್ಯದ ಮಾಜಿ ರಾಜ್ಯಪಾಲರಾದ ಶ್ರೀ ಹಂಸರಾಜ್ ಭಾರದ್ವಾಜ್, (3) ಮಾಜಿ ಉನ್ನತ ಶಿಕ್ಷಣ ಸಚಿವರು ಹಾಗೂ ರಾಜ್ಯ ವಿಶ್ವವಿದ್ಯಾನಿಲಯಗಳ ಸಮ ಕುಲಾಧಿಪತಿಗಳಾದ ಶ್ರೀ ಡಿ. ಮಂಜುನಾಥ್, (4) ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ವಾಣಿಜ್ಯ ನಿಕಾಯದ ಡೀನರು, ಶಿಕ್ಷಣ ಮಂಡಳಿ ಸದಸ್ಯರಾಗಿ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಸೇವೆ ಸಲ್ಲಿಸಿದ ಪ್ರೊ. ಬಿ.ಆರ್. ಅನಂತನ್, ಕನ್ನಡ ನಾಡಿನ ಖ್ಯಾತ ಸಾಹಿತಿಗಳಾದ ಪಾಟೀಲ್ ಪುಟ್ಟಪ್ಪ, ಖ್ಯಾತ ಕವಿಗಳಾದ ಪ್ರೊ. ನಿಸಾರ್ ಅಹಮದ್, ಇವರುಗಳ ನಿಧನಕ್ಕೆ ಸಂತಾಪ ಸೂಚಿಸಿ ಎರಡು ನಿಮಿಷ ಮೌನವನ್ನು ಆಚರಿಸಲಾಯಿತ್ತು.

ಶಿಕ್ಷಣ ಮಂಡಳಿಗೆ ಹೊಸದಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಿದರು.

1. ಪ್ರೊ. ರಮೇಶ್, ಡೀನರು, ಕಾನೂನು ನಿಕಾಯ, ಕಾನೂನು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಪ್ರೊ. ನಿಂಗಮ್ಮ ಸಿ. ಬೆಟ್ಸೂರ್ ಡೀನರು, ಶಿಕ್ಷಣ ನಿಕಾಯ, ಶಿಕ್ಷಣ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
3. ಪ್ರೊ. ಎಸ್.ಆರ್. ನಿರಂಜನ್, ಜೀವತಂತ್ರಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಹಾಗೂ ಮಾಜಿ ಕುಲಪತಿಗಳು ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಗುಲ್ಬರ್ಗಾ.
4. ಡಾ. ಎಸ್. ಟಿ. ರಾಮಚಂದ್ರ, ನಿರ್ದೇಶಕರು, (ಪ್ರಭಾರ) ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
5. ಶ್ರೀ. ದಿನೇಶ್ ಎಂ. ಗಾಂವ್‌ಕರ್, ಪ್ರಾಂಶುಪಾಲರು, ಸೆಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು, ಹಾಸನ.
6. ಡಾ. ಬಿ. ಎನ್. ಆಶಾ, ಪ್ರಾಂಶುಪಾಲರು, ದಿ ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್, ಓಂಕಾರಮಲ್ ಸೋಮಾನಿ ಶಿಕ್ಷಣ ಮಹಾವಿದ್ಯಾಲಯ, ಕುವೆಂಪುನಗರ, ಮೈಸೂರು.
7. ಡಾ. ಎಂ. ಶಾರದ, ಪ್ರಾಂಶುಪಾಲರು, ಶ್ರೀ ನಟರಾಜ ಪ್ರಥಮ ದರ್ಜೆ ಮಹಿಳಾ ವಸತಿ ಕಾಲೇಜು, ಮೈಸೂರು.

ಇದುವರೆವಿಗೂ ಶಿಕ್ಷಣ ಮಂಡಳಿ ಸದಸ್ಯರಾಗಿ, ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡವರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಪ್ರೊ. ಸಿ. ಬಸವರಾಜು, ಡೀನರು, ಕಾನೂನು ನಿಕಾಯ, ಕಾನೂನು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

2. ಪ್ರೊ. ಸಿ. ರಾಮಸ್ವಾಮಿ, ನಿರ್ದೇಶಕರು, (ಪ್ರಭಾರ) ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
3. ಶ್ರೀ ನಾಗೇಶ್ ಕರಿಯಪ್ಪ, ಸರ್ಕಾರದ ನಾಮ ನಿರ್ದೇಶಿತರು, ರಾಘವೇಂದ್ರನಗರ, ಮೈಸೂರು.
4. ಡಾ. ಎಸ್. ಮದಿಅಳಗನ್, ಡೀನರು, ಶಿಕ್ಷಣ ನಿಕಾಯ, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಪ್ರೊ. ಜಿ. ನಾಗೇಂದ್ರಪ್ಪ, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I.I | ದಿನಾಂಕ 04-12-2019ರಂದು ನಡೆದ ಶಿಕ್ಷಣ ಮಂಡಳ ಎರಡನೇ ಸಾಮಾನ್ಯ ಸಭೆಯ ನಡವಳಗಳನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | ದಿನಾಂಕ: 04-12-2019ರಂದು ನಡೆದ ಶಿಕ್ಷಣ ಮಂಡಳ ಎರಡನೇ ಸಾಮಾನ್ಯ ಸಭೆಯ ನಡವಳಗಳಗೆ ಸದಸ್ಯರಿಂದ ಯಾವುದೇ ಆಕ್ಷೇಪಣೆಗಳು ವ್ಯಕ್ತವಾಗದಿರುವುದರಿಂದ **ಎರಡನೇ ಸಾಮಾನ್ಯ ಸಭೆಯ ನಡವಳಗಳನ್ನು ದೃಢೀಕರಿಸಲಾಯಿತು.** |
| II.1 | Center for the Study of Social Exclusion and Inclusive Policy ಕೇಂದ್ರಕ್ಕೆ ಸಂಬಂಧಿಸಿದ ಕರಡು ಅಧಿನಿಯಮವನ್ನು ಅನುಮೋದಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡುತ್ತಾ, ರಾಷ್ಟ್ರದಲ್ಲಿ ಸಾಮಾಜಿಕವಾಗಿ ಹಿಂದುಳದಿರುವ ಜನರುಗಳ ಸಮಸ್ಯೆಗಳನ್ನು ಅಧ್ಯಯನ ಮಾಡುವ ಸಂಬಂಧವಾಗಿ ಮೈಸೂರು ವಿಶ್ವವಿದ್ಯಾನಿಲಯವು Center for the Study of Social Exclusion and Inclusive Policy ಕೇಂದ್ರವನ್ನು ಸ್ಥಾಪಿಸುವ ಸಂಬಂಧ 2008ರಲ್ಲಿ ಪ್ರಸ್ತಾವನೆಯನ್ನು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗಕ್ಕೆ ಸಲ್ಲಿಸಲಾಗಿತ್ತು. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಸದರಿ ಪ್ರಸ್ತಾವನೆಯನ್ನು ಅನುಮೋದಿಸಿ, ನಾನ್ ರೆಕರಿಂಗ್ ಶೀರ್ಷಿಕೆಗೆ ರೂ.5,00,000/-ಗಳನ್ನು ಹಾಗೂ ರೆಕರಿಂಗ್ ಶೀರ್ಷಿಕೆಗೆ ರೂ.35,00,000/-ಗಳನ್ನು ಅಂದರೆ ಒಟ್ಟು ರೂ.40,00,000/-ಗಳನ್ನು 11ನೇ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಲಾಗಿರುತ್ತದೆ. ಈ ಕೇಂದ್ರದಲ್ಲಿ ವ್ಯವಸ್ಥಿತವಾಗಿ ಕಾರ್ಯಗಳು ನಡೆಸುವ ಸಂಬಂಧ ಅಧ್ಯಾಪಕವರ್ಗ ಹುದ್ದೆಗಳು ಹಾಗೂ ಅಧ್ಯಾಪಕೇತರ ಹುದ್ದೆಗಳದ್ದು, ಇವರುಗಳಗೆ ದಿನಾಂಕ: 31-03-2020ರವರೆಗೆ ಯುಜಿಸಿ, ನವದೆಹಲ ಅವರು ವೇತನವನ್ನು ನೀಡುವುದರೊಂದಿಗೆ, ವ್ಯವಸ್ಥಿತವಾಗಿ ಕೈಗೊಂಡಿರುವ ಕಾರ್ಯಗಳಗೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಈ ಕೇಂದ್ರವು ಮುಂದುವರೆಸಿಕೊಂಡು ಹೋಗಲು ಹಾಗೂ ಪ್ರಸ್ತುತವಿರುವ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡುವ ಸಂಬಂಧ ಅನುದಾನ ನೀಡಿದರೆ ಸೂಕ್ತವೆಂದು ಪರಾಮರ್ಶಿಸಿ ಕೇಂದ್ರಕ್ಕೆ ಅಧಿನಿಯಮವನ್ನು ಸಿದ್ಧಪಡಿಸಲು ಅಧಿನಿಯಮದ ರಚನಾ ಸಮಿತಿಯನ್ನು ರಚಿಸಲಾಯಿತು. ಸಿದ್ಧಪಡಿಸಿರುವ ಅಧಿನಿಯಮವನ್ನು ಈಗಾಗಲೇ ಸರ್ಕಾರದ ಅನುಮೋದನೆಗಾಗಿ, ಎರಡು ಭಾರಿ ಕಳುಹಿಸಲಾಗಿದ್ದು ಕಾರಣಾಂತರಗಳಂದ ರಾಜ್ಯ ಸರ್ಕಾರವು ಹಿಂದಿರುಗಿಸಿರುತ್ತದೆ. ಆದರೂ ರಾಜ್ಯ ಸರ್ಕಾರದಿಂದ ಅಧಿನಿಯಮ ಅನುಮೋದಿಸಿಕೊಂಡರೆ ಅಧಿಕೃತವಾಗಿ ಕೇಂದ್ರವೆಂದು ಪರಿಗಣಿಸಲಾಗುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ಅನುಮೋದನೆ ಪಡೆದು ರಾಜ್ಯ ಸರ್ಕಾರಕ್ಕೆ Center for the Study of Social Exclusion and Inclusive Policy ಕೇಂದ್ರಕ್ಕೆ ಸಂಬಂಧಿಸಿದ ಕರಡು ಅಧಿನಿಯಮವನ್ನು ಅನುಮೋದನೆಗೆ ಸಲ್ಲಿಸಲು ಸಭೆಯು ಒಪ್ಪಿಗೆ ಸೂಚಿಸಬೇಕೆಂದು ಮಾನ್ಯ ಕುಲಪತಿಯವರು ತಿಳಸಿದರು.<br><br>ಪ್ರೊ. ರಮೇಶ್, ಡೀನರು, ಕಾನೂನು ನಿಕಾಯ, ಮಾನಸಗಂಗೋತ್ರಿ, ಮೈಸೂರು ಇವರು ಮಾತನಾಡಿ, ಸದರಿ ಕೇಂದ್ರದಲ್ಲಿ ನಾನು ಈ ಹಿಂದೆ ಸುಮಾರು ನಾಲ್ಕುವರೆ ವರ್ಷಗಳವರೆಗೆ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದು, ಇದುವರೆವಿಗೂ ಕೇಂದ್ರದಲ್ಲಿ 20 ಯೋಜನೆಗಳು ಮತ್ತು 48 ವಿಚಾರ ಸಂಕಿರಣಗಳು, ಸಮ್ಮೇಳನಗಳು (ಅಂತರಾಷ್ಟ್ರೀಯ ಸಮ್ಮೇಳನನ್ನೊಳಗೊಂಡಂತೆ) ಕಾರ್ಯಗತಗೊಂಡಿರುತ್ತದೆ. ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು ಕೇಂದ್ರದ ಕೆಲಸಕಾರ್ಯಗಳನ್ನು ಪ್ರಶಂಸಿಸಿರುತ್ತದೆ. ಈ ರೀತಿ ಪ್ರಶಂಸೆ ಪಡೆದ ಸದರಿ ಕೇಂದ್ರ |

| | |
|---|---|
| | ಕರ್ನಾಟಕದಲ್ಲೇ ಮೊದಲನೆಯದಾಗಿರುತ್ತದೆ. ಆದ್ದರಿಂದ, ಸದರಿ ಕೇಂದ್ರವನ್ನು ಮುಂದುವರೆಸಿಕೊಂಡು ಹೋಗುವುದು ಸೂಕ್ತವಾಗಿರುತ್ತದೆಂದು ಹಾಗೂ ಈ ಕೇಂದ್ರದಿಂದ ಇದುವರೆವಿಗೂ 25 ಪುಸ್ತಕಗಳನ್ನು ಪ್ರಕಟಿಸಲಾಗಿರುತ್ತದೆ. ಈ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ನಿಗಧಿತ ಅವಧಿಗೆ ವೇತನ ನೀಡುವುದರೊಂದಿಗೆ, ಯುಜಿಸಿಯ 10ನೇ ಯೋಜನೆಯಲ್ಲಿ ಏನೇನೂ ಸೌಲಭ್ಯ ನೀಡಿರುವರೋ ಆ ಎಲ್ಲಾ ಸೌಲಭ್ಯಗಳನ್ನು ಮುಂದಿನ ದಿನಗಳಲ್ಲೂ ವಿಸ್ತರಿಸಿ ಸೇವಾ ಭದ್ರತೆ ನೀಡಬೇಕೆಂದು ಕೋರಿದರು. |
| ತೀರ್ಮಾನ | **Center for the Study of Social Exclusion and Inclusive Policy ಕೇಂದ್ರಕ್ಕೆ ಸಂಬಂಧಿಸಿದ ಅಧಿನಿಯಮವನ್ನು ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಹಾಗೂ ಅಂಕಿತಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು.** |
| II.2 | ಪರಿಷ್ಕೃತ M.Phil ವಿನಿಯಮಾವಳಿಗೆ ಸರ್ಕಾರದ ಅನುಮೋದನೆ ಪಡೆಯುವ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ 2016ರ ನಂತರ ಸರ್ಕಾರದ ನೇಮಕಾತಿಗಳಲ್ಲಿ ಎಂ.ಫಿಲ್ ಪದವಿಗಳನ್ನು ಪರಿಗಣಿಸದೆ ಇರುವುದರಿಂದ ಸದರಿ ಕೋರ್ಸ್‌ಗಳನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ.ದಿನಾಂಕ: 05-12-2019ರಂದು ನಡೆದ ಸಭೆಯಲ್ಲಿ ಶೈಕ್ಷಣಿಕ ಉನ್ನತೀಕರಣಕ್ಕೆ ಹಾಗೂ ನ್ಯಾಕ್ ಮಾನ್ಯತೆ ಪಡೆಯುವ ಸಂಬಂಧ ಅಧ್ಯಯನ ವಿಷಯಗಳ ವ್ಯಾಪ್ತಿಯನ್ನು ವಿಸ್ತರಿಸುವುದಕ್ಕೆ 2014ರಲ್ಲಿ ಸಿದ್ಧಪಡಿಸಿದ ಎಂ.ಫಿಲ್ ವಿನಿಯಮಾವಳಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಲು ಸಭೆಯು ಒಪ್ಪಿಗೆ ನೀಡಬೇಕೆಂದು ತಿಳಿಸಿದರು. |
| ತೀರ್ಮಾನ | **ಪರಿಷ್ಕೃತ M.Phil ವಿನಿಯಮಾವಳಿಗೆ ಸರ್ಕಾರದ ಅನುಮೋದನೆಗಾಗಿ ಕಳುಹಿಸಲು ತೀರ್ಮಾನಿಸಲಾಯಿತು.** |
| II.3 | ದೂರ ಶಿಕ್ಷಣ ನಿರ್ದೇಶನಾಲಯದ ಮುಖಾಂತರ ಯು.ಜಿ.ಸಿ, ನಿಯಮಾವಳಿ ಅನ್ವಯ CBCS and Continuous Assessment and to offer Diploma, P.G. Diploma and Certificate Programmes through open Distance Learning Mode. |
| | ಮಾನ್ಯ ಕುಲಪತಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಯುಜಿಸಿ ಪ್ರಕಟಣೆಯನ್ವಯ ದೂರ ಶಿಕ್ಷಣದಲ್ಲಿ ಡಿಪ್ಲೋಮ ಮತ್ತು ಪಿಜಿ ಡಿಪ್ಲೋಮ ಕೋರ್ಸ್‌ಗಳನ್ನು ಪ್ರಾರಂಭಿಸಲು ಅವಕಾಶವಿರುವುದರಿಂದ ಅನುಮೋದನೆ ನೀಡಬೇಕೆಂದು ತಿಳಿಸಿದರು.<br><br>ಪ್ರೊ. ಡಿ. ಆನಂದ್, ಡೀನರು, ವಾಣಿಜ್ಯ ನಿಕಾಯ, ಇವರು ಮಾತನಾಡಿ, ಸರ್ಕಾರದ ನಿಲುವನ್ನು ಗಮನಿಸಿದರೆ ಹಾಗೂ ಸಾರ್ವಜನಿಕವಾಗಿ ದೂರ ಶಿಕ್ಷಣದ ಬಗ್ಗೆ ಅಸ್ಪಷ್ಟತೆ ಅಭಿಪ್ರಾಯವಿರುವುದರಿಂದ ಸ್ಪಷ್ಟ ಕಾರಣಗಳನ್ನು ನೀಡಬೇಕೆಂದು ಕೋರಿದರು.<br><br>ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು ಸರ್ಕಾರವು ಮುಂದಿನ ಶೈಕ್ಷಣಿಕ ವರ್ಷದ ಪ್ರವೇಶಾತಿಯನ್ನು ಆರಂಭಿಸದಂತೆ ಸೂಚಿಸಿದ್ದು, ಪ್ರಸಕ್ತ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವವರನ್ನು ಮುಂದುವರೆಸಿಕೊಂಡು ಹೋಗಬಹುದೆಂದು ಸಹ ಸೂಚಿಸಿದೆ. ಹಾಗೆಯೇ ಮುಂದಿನ ದಿನಗಳಲ್ಲಿ ಸರ್ಕಾರವು ಈ ನಿಲುವನ್ನು ಬದಲಾವಣೆ ಮಾಡುವ ಸಾಧ್ಯತೆಯಿರುತ್ತದೆ. ಈಗಾಗಲೇ ಕುವೆಂಪು ವಿಶ್ವವಿದ್ಯಾನಿಲಯವು ಸರ್ಕಾರದ ನಿರ್ಧಾರವನ್ನು ಪುನರ್ ಪರಿಶೀಲನೆ ಮಾಡುವಂತೆ ಮನವಿ ಮಾಡಿದೆ. ಹಾಗಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಾಲಿ ಇರುವ ದೂರ ಶಿಕ್ಷಣ ಕೋರ್ಸ್‌ಗಳನ್ನು ಮುಂದುವರಿಸಲು ಅವಕಾಶ ನೀಡುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗುವುದು ಎಂದು ಸಭೆಗೆ ತಿಳಿಸಿದರು. ಯುಜಿಸಿಯವರು ಡಿಪ್ಲೋಮ ಕೋರ್ಸುಗಳನ್ನು ಪ್ರಾರಂಭಿಸುವ ಮೊದಲು ಅನುಮತಿ ಪಡೆಯಬೇಕೆಂದು ನಿರ್ದೇಶಿಸಿರುತ್ತಾರೆ. ಈ ಸಂಬಂಧ ಪ್ರಸ್ತುತವಿರುವ 12 ಕೋರ್ಸುಗಳನ್ನು ಯುಜಿಸಿ ಸಮಿತಿಯವರು ಪರಿಶೀಲನೆ ಮಾಡಿ ಅನುಮೋದನೆ ನೀಡಿರುತ್ತಾರೆ. ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ನೀಡುವ ಎನ್‌ಐಆರ್‌ಎಫ್ ರ‍್ಯಾಂಕಿಂಗ್‌ನಲ್ಲಿ ಮೈವಿವಿಗೆ 27ನೇ ರ‍್ಯಾಂಕ್ ಲಭ್ಯವಾಗಿದ್ದು, ಆನ್‌ಲೈನ್ ಶಿಕ್ಷಣ ನಡೆಸಲು ವಿಶ್ವವಿದ್ಯಾನಿಲಯಕ್ಕೆ ವಿಶೇಷ ಅವಕಾಶವಿದೆ. ಒಂದು ವೇಳೆ ಸರ್ಕಾರ ದೂರ ಶಿಕ್ಷಣವನ್ನು ಕೈಬಿಡುವಂತೆ ನಿರ್ದೇಶಿಸಿದರೆ ಅದನ್ನು ಆನ್‌ಲೈನ್ ಕೋರ್ಸ್ ಆಗಿ ಪರಿವರ್ತಿಸಲಾಗುವುದು ಹಾಗೂ ಮೈಸೂರು ವಿಶ್ವವಿದ್ಯಾನಿಲಯವು ದೂರ ಶಿಕ್ಷಣ ಪ್ರಾರಂಭಿಸಿದ ನಂತರ ರಾಜ್ಯ ಸರ್ಕಾರವು ಈ ನಿರ್ಧಾರ ತೆಗೆದುಕೊಂಡಿರುವುದರಿಂದ ದೂರ ಶಿಕ್ಷಣ ನಿರ್ದೇಶನಾಲಯದ ಮುಖಾಂತರ CBCS and Continuous Assessment |

| | |
|---|---|
| | and to offer Diploma, PG Diploma and Certificate Programmes ನಡೆಸಲು ಉದ್ದೇಶಿಸಿರುವುದಕ್ಕೆ ಸಭೆಯು ಅನುಮತಿ ನೀಡಬೇಕೆಂದು ತಿಳಿಸಿದರು. |
| ತೀರ್ಮಾನ | **ದೂರ ಶಿಕ್ಷಣ ನಿರ್ದೇಶನಾಲಯದ ಮುಖಾಂತರ ಯುಜಿಸಿ ನಿಯಮಾವಳಿ ಅನ್ವಯ CBCS and Continuous Assessment and to offer Diploma, PG Diploma and Certificate Programmes through open Distance Learning Modeಅನ್ನು ಅನುಮೋದಿಸಲಾಯಿತು.** |
| II.4 | ಪ್ರೊ. ವೈ. ಎಸ್. ಸಿದ್ದೇಗೌಡ ರವರ ಹೆಸರಿನಲ್ಲಿ ದತ್ತಿ ಉಪನ್ಯಾಸ ಸ್ಥಾಪನೆ ಮಾಡುವ ಬಗ್ಗೆ. |
| | ಮೈಸೂರು ವಿಶ್ವವಿದ್ಯಾನಿಲಯ ಹಳೆಯ ವಿದ್ಯಾರ್ಥಿಗಳ ಸಂಘ, ಸಮಾಜಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಪ್ರೊ.ವೈ.ಎಸ್.ಸಿದ್ದೇಗೌಡರವರ ಹೆಸರಿನಲ್ಲಿ ದತ್ತಿ ಉಪನ್ಯಾಸ ಸ್ಥಾಪನೆ ಮಾಡಲು ರೂ.5,00,000/-ಗಳಲ್ಲಿ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ ಉಳಿದ ಶೇ.೮೦ರಷ್ಟು ಹಣವನ್ನು ಸಮಾಜಕಾರ್ಯ ಅಧ್ಯಯನ ವಿಭಾಗದಲ್ಲಿ ಉಪನ್ಯಾಸ ಕಾರ್ಯಕ್ರಮಗಳನ್ನು ಕೆಲವು ಷರತ್ತುಗಳೊಂದಿಗೆ ಏರ್ಪಡಿಸುವ ಸಂಬಂಧ ಅನುಮೋದನೆ ನೀಡಬಹುದೆಂದು ಮಾನ್ಯ ಕುಲಪತಿಗಳು ತಿಳಿಸಿದರು. |
| ತೀರ್ಮಾನ | **ಸಮಾಜಕಾರ್ಯ ಅಧ್ಯಯನ ವಿಭಾಗದಲ್ಲಿ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸುವ ಬಗ್ಗೆ ಪ್ರೊ .ವೈ.ಎಸ್.ಸಿದ್ದೇಗೌಡರವರ ಹೆಸರಿನಲ್ಲಿ ದತ್ತಿ ಉಪನ್ಯಾಸ ಸ್ಥಾಪನೆ ಮಾಡುವುದನ್ನು ಸಭೆಯು ಅನುಮೋದಿಸಿತು.** |
| II.5 | NCC, NSS, ದೈಹಿಕ ಶಿಕ್ಷಣ ವಿಭಾಗ ಮತ್ತು ವಿದ್ಯಾರ್ಥಿ ಕ್ಷೇಮಪಾಲನಾ ವತಿಯಿಂದ ಅಂತರ ವಿಶ್ವವಿದ್ಯಾನಿಲಯ ಕಾರ್ಯಕ್ರಮ, ಸಾಹಸ ಶಿಬಿರ, ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಪರೀಕ್ಷೆ ನಡೆಸುವ ಬಗ್ಗೆ. |
| | NCC, NSS, ದೈಹಿಕ ಶಿಕ್ಷಣ ವಿಭಾಗ ಮತ್ತು ವಿದ್ಯಾರ್ಥಿ ಕ್ಷೇಮಪಾಲನಾ ವತಿಯಿಂದ ಅಂತರ ವಿಶ್ವವಿದ್ಯಾನಿಲಯ ಕಾರ್ಯಕ್ರಮ, ಸಾಹಸ ಶಿಬಿರ, ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಅಕ್ಟೋಬರ್/ನವೆಂಬರ್ ಮಾಹೆಗಳಲ್ಲಿ ನಡೆಯುವ ವಿವಿಧ ವಿಶ್ವವಿದ್ಯಾನಿಲಯದ ವಿವಿಧ ಪದವಿಯ ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳ ಪರೀಕ್ಷೆಗಳಿಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲವೆಂದು, ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡರೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ವಿಶ್ವವಿದ್ಯಾನಿಲಯದ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿದರೆ ಪರೀಕ್ಷೆಯಿಂದ ವಂಚಿತರಾಗುತ್ತಿದ್ದಾರೆಂದು ತಿಳಿಸುತ್ತಾ, ಮೇಲ್ಕಂಡ ಚಟುವಟಿಕೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಪ್ರತಿಭೆ ಪ್ರದರ್ಶಿಸಲು ಪ್ರೋತ್ಸಾಹಿಸುವುದರಿಂದ ವಿಶ್ವವಿದ್ಯಾನಿಲಯದ ಘನತೆ-ಗೌರವ ಇಮ್ಮಡಿಗೊಳ್ಳುವ ಸಂಭವ ಇರುವುದರಿಂದ ಪರೀಕ್ಷೆ ಬರೆಯಲಾಗದ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಪ್ರತ್ಯೇಕ ಪರೀಕ್ಷೆ ನಡೆಸಲು ಸಭೆಯು ಅನುಮತಿ ನೀಡಬೇಕೆಂದು ಮಾನ್ಯ ಕುಲಪತಿಯವರು ಕೋರಿದರು.<br>ಪ್ರೊ. ಜಿ.ವೆಂಕಟೇಶ್‌ಕುಮಾರ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಮಾನಸಗಂಗೋತ್ರಿ, ಮೈಸೂರು ಇವರು ಸಭೆಯನ್ನು ಉದ್ದೇಶಿಸಿ ಮಾತನಾಡಿ, ಮೇಲ್ಕಾಣಿಸಿದ ಚಟುವಟಿಕೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ, ಭಾಗವಹಿಸುವ ದಿನಗಳಂದು ಹಾಜರಾತಿ ನೀಡುವುದು ಸೂಕ್ತವೆಂದು ತಿಳಿಸಿದರು.ಇದಕ್ಕೆ ಪ್ರತಿಕ್ರಿಯಿಸಿದ ಸದಸ್ಯರಾದ ಪ್ರೊ. ಬಿ.ಎಸ್.ವಿಶ್ವನಾಥ್ ಅವರು ವಿದ್ಯಾರ್ಥಿಗಳು ಭಾಗವಹಿಸಿರುವ ಚಟುವಟಿಕೆಗಳ ಪ್ರಮಾಣ ಪತ್ರವನ್ನು ಸಲ್ಲಿಸಿದರೆ ಹಾಜರಾತಿ ನೀಡಲಾಗುವುದೆಂದು ತಿಳಿಸಿದರು. . |
| ತೀರ್ಮಾನ | **NCC, NSS, ದೈಹಿಕ ಶಿಕ್ಷಣ ವಿಭಾಗ ಮತ್ತು ವಿದ್ಯಾರ್ಥಿ ಕ್ಷೇಮಪಾಲನಾ ವತಿಯಿಂದ ಅಂತರ ವಿಶ್ವವಿದ್ಯಾನಿಲಯ ಕಾರ್ಯಕ್ರಮ, ಸಾಹಸ ಶಿಬಿರ, ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಪ್ರತ್ಯೇಕ ಪರೀಕ್ಷೆ ನಡೆಸಲು ಹಾಗೂ ಚಟುವಟಿಕೆಗಳಲ್ಲಿ ಭಾಗವಹಿಸುವ ದಿನಗಳಂದು ವಿದ್ಯಾರ್ಥಿಗಳು ಪ್ರಮಾಣ ಪತ್ರವನ್ನು ಸಂಬಂಧಿಸಿದ ವಿಭಾಗಕ್ಕೆ ಸಲ್ಲಿಸಿದರೆ ಹಾಜರಾತಿ ನೀಡಲು ಹಾಗೂ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.** |

| | |
|---|---|
| II.6 | 2019-20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮರ್ಥನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | **2019-20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಸಮರ್ಥಿಸಿತು.** |
| II.7 | 2019-20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್ ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮರ್ಥನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | **2019-20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್ ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಸಮರ್ಥಿಸಿತು.** |
| II.8 | 2019-20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್, ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮರ್ಥನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | **2019-20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್, ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ಸಭೆಯು ಅನುಸಮರ್ಥಿಸಿತು.** |
| II.9 | 2019-20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಎಸ್.ಬಿ.ಆರ್.ಆರ್, ಮಹಾಜನ ಪ್ರಥಮ ದರ್ಜೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮರ್ಥನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | **2019-20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಎಸ್.ಬಿ.ಆರ್.ಆರ್, ಮಹಾಜನ ಪ್ರಥಮ ದರ್ಜೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಸಮರ್ಥಿಸಿತು.** |
| II.10 | 2019-20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್. ಸ್ವಾಯತ್ತತಾ ಕಾಲೇಜಿಗೆ ಪರಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮರ್ಥನೆಗಾಗಿ ಮಂಡಿಸುವ ಬಗ್ಗೆ. |
| | ಕಾನೂನು ನಿಕಾಯದ ಡೀನರಾದ ಪ್ರೊ.ರಮೇಶ್‌ರವರು ಮಾತನಾಡಿ, ಸೆಂಟ್ ಫಿಲೋಮಿನಾಸ್ ಕಾಲೇಜಿನಲ್ಲಿ ನೇಮಕಾತಿ ಸಂದರ್ಭದಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸದೆ ಇರುವುದು ಕಂಡುಬಂದಿದೆ. ಆದುದರಿಂದ, ಮುಂದಿನ ಸಾಲಿನಲ್ಲಿ ಪರಾಮರ್ಶನ ಸಮಿತಿಯು ಭೇಟಿ ನೀಡಿದಾಗ ಈ ಅಂಶವನ್ನು ಪರಿಶೀಲಿಸುವುದು ಸೂಕ್ತವೆಂದು ಅಭಿಪ್ರಾಯಿಸಿ, ವಿದ್ಯಾಸಂಸ್ಥೆಗೆ ವಿಶ್ವವಿದ್ಯಾನಿಲಯದ ವತಿಯಿಂದ ಕಟ್ಟುನಿಟ್ಟಿನ ಆದೇಶವನ್ನು ನೀಡಬೇಕೆಂದು ತಿಳಿಸಿದರು. |
| ತೀರ್ಮಾನ | **2019-20ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್. ಸ್ವಾಯತ್ತತಾ ಕಾಲೇಜಿಗೆ ಪರಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಸಮರ್ಥಿಸಿತು.** |
| II.11 | 2019-20ನೇ ಶೈಕ್ಷಣಿಕ ಸಾಲಿನ ಮಂಡ್ಯದ ಸರ್ಕಾರಿ ಮಹಾವಿದ್ಯಾಲಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಅನುಮರ್ಥನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | **2019-20ನೇ ಶೈಕ್ಷಣಿಕ ಸಾಲಿನ ಮಂಡ್ಯದ ಸರ್ಕಾರಿ ಮಹಾವಿದ್ಯಾಲಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಸಮರ್ಥಿಸಿತು.** |

| | |
|---|---|
| II.12 | 2019-20ನೇ ಶೈಕ್ಷಣಿಕ ಸಾಲಿನ ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮರ್ಥನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | **2019-20ನೇ ಶೈಕ್ಷಣಿಕ ಸಾಲಿನ ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಸಮರ್ಥಿಸಿತು.** |
| II.13 | 2019-20ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಅನುಮರ್ಥನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | **2019-20ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಸಮರ್ಥಿಸಿತು.** |
| II.14 | 2019-20ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮರ್ಥನೆಗಾಗಿ ಬಗ್ಗೆ. |
| ತೀರ್ಮಾನ | **2019-20ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಸಮರ್ಥಿಸಿತು.** |
| II.15 | ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಮಂಡ್ಯ ಜಿಲ್ಲೆ, ಮದ್ದೂರು ತಾ., ಭಾರತೀನಗರದ (ಕೆ.ಎಂ.ದೊಡ್ಡಿ) ಭಾರತೀ ಕಾಲೇಜಿಗೆ ಹೊಸದಾಗಿ ಸ್ವಾಯತ್ತತಾ ಸ್ಥಾನಮಾನ ನೀಡುವ ಬಗ್ಗೆ. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಮಂಡ್ಯ ಜಿಲ್ಲೆ, ಮದ್ದೂರು ತಾ., ಭಾರತೀನಗರದ (ಕೆ.ಎಂ.ದೊಡ್ಡಿ) ಭಾರತೀ ಕಾಲೇಜಿಗೆ ಹೊಸದಾಗಿ ಸ್ವಾಯತ್ತತಾ ಸ್ಥಾನಮಾನ ನೀಡುವ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯಲು ತೀರ್ಮಾನಿಸಲಾಯಿತು.** |
| II.16 | B.Tech ವಿದ್ಯಾರ್ಥಿಗಳಿಗೆ online ಮುಖಾಂತರ ಪರೀಕ್ಷೆಯನ್ನು ನಡೆಸಿರುವ ಬಗ್ಗೆ – ಅನುಸಮರ್ಥನೆಗಾಗಿ. |
| | ಕಳೆದ 10 ವರ್ಷಗಳಿಂದ ಭಾರತ-ಚೀನಾ ಒಡಂಬಡಿಕೆಯಂತೆ ಪ್ರತಿ ವರ್ಷ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 100 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಕೋವಿಡ್-19 ಕಾರಣ ಆರಂಭದಲ್ಲೇ 31 B.Tech ವಿದ್ಯಾರ್ಥಿಗಳನ್ನು ಚೀನಾಗೆ ಕಳುಹಿಸಿಕೊಡಲಾಯಿತು. ಅವರುಗಳಿಗೆ ಆನ್‌ಲೈನ್ ಮೂಲಕ ಬೋಧನೆ ಮಾಡಲಾಗಿದ್ದು, ಕೋವಿಡ್-19 ಹಿನ್ನೆಲೆಯಲ್ಲಿ ಆನ್‌ಲೈನ್ ಮುಖಾಂತರ ಪರೀಕ್ಷೆ ನಡೆಸಿಕೊಡಬೇಕೆಂದು ಚೀನಾದ Huanghuai University ರವರು ಕೋರಿದ್ದರಿಂದ, **ಇದೊಂದು ಬಾರಿ ಮಾತ್ರ (One time measure)**ಎಂದು ಪರಿಗಣಿಸಿ B.Tech ವಿದ್ಯಾರ್ಥಿಗಳಿಗೆ online ಮುಖಾಂತರ ಪರೀಕ್ಷೆ ನಡೆಸಿರುವುದರಿಂದ ಸಭೆಯು ಅನುಸಮರ್ಥಿಸಬೇಕೆಂದು ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿದರು.<br>ಮುಂದುವರೆದು, ಚೀನಾದಿಂದ ಈಗಾಗಲೇ ಕೆಲ ವಿದ್ಯಾರ್ಥಿಗಳು ಪ್ರವೇಶಾತಿಗಾಗಿ ಶುಲ್ಕವನ್ನು ಪಾವತಿಸಿದ್ದು, ಸದ್ಯದ ಪರಿಸ್ಥಿತಿಯಲ್ಲಿ ಭಾರತ ಮತ್ತು ಚೀನಾ ನಡುವೆ ವಿವಾದ ಇರುವುದರಿಂದ ಅವರಿಗೆ ವೀಸಾ ದೊರೆತಿಲ್ಲ. ಅವರಿಗೆ ವೀಸಾ ಸಿಗುವವರೆಗೂ ಆನ್‌ಲೈನ್‌ನಲ್ಲಿಯೇ ತರಗತಿ ನಡೆಸಲು ನಿರ್ಧರಿಸಲಾಗಿದೆಯೆಂದು ತಿಳಿಸಿದರು. |
| ತೀರ್ಮಾನ | **B.Tech ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯವು online ಮುಖಾಂತರ ನಡೆಸಿರುವ ಪರೀಕ್ಷೆಯನ್ನು ಸಭೆಯು ಅನುಸಮರ್ಥಿಸಿತು.** |

| | |
|---|---|
| II.17 | 2020-21ನೇ ಸಾಲಿನ ಆಯವ್ಯಯ ಅಂದಾಜುಗಳು. |
| | ಕೋವಿಡ್-19, ಸರ್ಕಾರದ ಸುತ್ತೋಲೆ ಅನ್ವಯ ಶಿಕ್ಷಣ ಮಂಡಳ ಮೂರನೇ ಸಾಮಾನ್ಯ ಸಭೆಯನ್ನು ಮುಂದೂಡಿದ ಪ್ರಯುಕ್ತ 2020-21ನೇ ಸಾಲಿನ ಕರಡು ಆಯವ್ಯಯ ಅಂದಾಜುಗಳ ಪ್ರತಿಯನ್ನು ಈಗಾಗಲೇ ಮಾನ್ಯ ಸದಸ್ಯರುಗಳಿಗೆ ಕಳುಹಿಸಿ ಇದರಲ್ಲಿ ನಮೂದಿಸಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಆಕ್ಷೇಪಣೆಗಳು ಇದ್ದಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ಕೋರಲಾಗಿತ್ತು. ಸದಸ್ಯರಿಂದ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲವೆಂದು ಮಾನ್ಯ ಕುಲಪತಿಯವರು ಸಭೆಯ ಗಮನಕ್ಕೆ ತಂದು 2020-21ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಸುಮಾರು **ರೂ.(-5,50,00,000-00) ಐದುವರೆ ಕೋಟಿಗಳಷ್ಟು** ಕೊರತೆ ಉಂಟಾಗಿರುತ್ತದೆಂದು ತಿಳಿಸಿ 2020-2021ನೇ ಸಾಲಿನ ಆಯವ್ಯಯ ಅಂದಾಜನ್ನು ಅನುಮೋದಿಸಬಹುದೆಂದು ತಿಳಿಸಿದರು. |
| ತೀರ್ಮಾನ | **2020-21ನೇ ಸಾಲಿನ ಕರಡು ಆಯವ್ಯಯ ಅಂದಾಜುಗಳನ್ನು ಒಪ್ಪಲಾಯಿತು.** |
| II.18 | 2019-20ನೇ ಶೈಕ್ಷಣಿಕ ಸಾಲಿನಿಂದ ಮಹಾತ್ಮಗಾಂಧಿ ಬಿ.ಎಡ್., ಕಾಲೇಜಿನ ಸ್ಥಳ ಬದಲಾವಣೆ ಮಾಡುವ ಬಗ್ಗೆ. |
| | ಪರಾಮರ್ಶನ ಸಮಿತಿಯು ನೂತನವಾಗಿ ನಿರ್ಮಿಸಿರುವ ಕಾಲೇಜಿನ ಕಟ್ಟಡಕ್ಕೆ ಭೇಟಿ ನೀಡಿ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ ಕಾಲೇಜಿನ ಬದಲಾವಣೆಗೆ ಶಿಫಾರಸ್ಸು ಮಾಡಿರುತ್ತಾರೆ. ವಿಶ್ವವಿದ್ಯಾನಿಯದ ಪ್ರಾಧಿಕಾರಗಳ ಅನುಮೋದನೆಯನ್ನು ಪಡೆದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುವುದರಿಂದ ಸಭೆಯು ಅನುಮೋದನೆ ನೀಡಬೇಕೆಂದು ಮಾನ್ಯ ಕುಲಪತಿಯವರು ತಿಳಿಸಿದರು. |
| ತೀರ್ಮಾನ | **2019-20ನೇ ಶೈಕ್ಷಣಿಕ ಸಾಲಿನಿಂದ ಮಹಾತ್ಮಗಾಂಧಿ ಬಿ.ಎಡ್., ಕಾಲೇಜಿನ ಸ್ಥಳ ಬದಲಾವಣೆ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಲಾಯಿತು.** |
| II.19 | BASLP ಕೋರ್ಸಿನ ತರಗತಿಗಳಿಗೆ ನಿಗಧಿಪಡಿಸಿರುವ ಕನ್ನಡ ಭಾಷಾ ವಿಷಯ ಅನುಸಮರ್ಥನೆಗಾಗಿ. |
| | All India Institute of Speech & Hearing BASLP ಪದವಿ ಕಾಲೇಜುಗಳ ಕೋರ್ಸಿನ ಕನ್ನಡ ಭಾಷಾ ವಿಷಯದ ಪಠ್ಯಕ್ರಮವನ್ನು ರೂಪಿಸಿ ಅಧಿಸೂಚನೆ ಹೊರಡಿಸಲಾಗಿದೆ. ಇದು ಕನ್ನಡ ಅಧ್ಯಯನ ಮಾಡುವವರಿಗೆ ಅನುಕೂಲವಾಗುವುದರಿಂದ ಸಭೆಯು ಅನುಸಮರ್ಥಿಸಬಹುದೆಂದು ಮಾನ್ಯ ಕುಲಪತಿಯವರು ತಿಳಿಸಿದರು. |
| ತೀರ್ಮಾನ | **BASLP ಕೋರ್ಸಿನ ತರಗತಿಗಳಿಗೆ ನಿಗಧಿಪಡಿಸಿರುವ ಕನ್ನಡ ಭಾಷಾ ವಿಷಯವನ್ನು ಸಭೆಯು ಅನುಸಮರ್ಥಿಸಿತು.** |
| II.20 | ಮೈಸೂರು ವಿಶ್ವವಿದ್ಯಾನಿಲಯ ಮತ್ತು ಆಡಳಿತ ತರಬೇತಿ ಸಂಸ್ಥೆ, ಕರ್ನಾಟಕ ಸರ್ಕಾರ, ಮೈಸೂರು ಇವರೊಂದಿಗೆ MOOCs ಯೋಜನೆಯಡಿ ಆನ್‌ಲೈನ್ ವಿಷಯಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಸಿದ್ಧಪಡಿಸಿರುವ ಪಠ್ಯಕ್ರಮ/ಪರೀಕ್ಷಾ ವಿಧಾನವನ್ನು ಶೈಕ್ಷಣಿಕ ಸಭೆ ಒಪ್ಪಿಗೆಗಾಗಿ. |
| | ಆಡಳಿತ ತರಬೇತಿ ಸಂಸ್ಥೆ, ಕರ್ನಾಟಕ ಸರ್ಕಾರ, ಮೈಸೂರು ಪ್ರತಿಷ್ಟಿತ ಸಂಸ್ಥೆಯಾಗಿದ್ದು, ಸಂಸ್ಥೆಯಲ್ಲಿ ಅಖಿಲ ಭಾರತ ಸೇವಾ/ಕರ್ನಾಟಕ ಸೇವಾ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಇಂತಹ ಪ್ರತಿಷ್ಠಿತ ಸಂಸ್ಥೆಯು ಮೈಸೂರು ವಿಶ್ವವಿದ್ಯಾನಿಲಯದ ಜೊತೆ ಈಗಾಗಲೇ ಮೂಕ್ಸ್ ಯೋಜನೆಯಡಿ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲು ಒಡಂಬಡಿಕೆಯನ್ನು ಮಾಡಿಕೊಂಡಿರುತ್ತಾರೆ. ಇದೇ ರೀತಿ ಕರ್ನಾಟಕ ಪೊಲೀಸ್ ಅಕಾಡೆಮಿಯವರು ಮೈಸೂರು ವಿಶ್ವವಿದ್ಯಾನಿಲಯದೊಂದಿಗೆ ಕೆಲವೊಂದು ಸ್ಪೆಷಲೈಜ್ಡ್ ಕೋರ್ಸ್‌ಗಳನ್ನು ನಡೆಸಲು ತೀರ್ಮಾನಿಸಿ, ಒಡಂಬಡಿಕೆಯನ್ನು ಮಾಡಿಕೊಳ್ಳುವ ಹಂತದಲ್ಲಿದ್ದಾರೆ. ಈ ಎರಡು ಸಂಸ್ಥೆಗಳೊಂದಿಗಿನ ವಿಶ್ವವಿದ್ಯಾನಿಲಯದ ಸಹಭಾಗಿತ್ವವು, ವಿಶ್ವವಿದ್ಯಾವಿದ್ಯಾನಿಲಯವು ನ್ಯಾಕ್‌ನಿಂದ ಶ್ರೇಯಾಂಕವನ್ನು ಪಡೆಯಲು ಸಹಕಾರಿಯಾಗುತ್ತದೆಂದು ತಿಳಿಸಿದರು. ಆದುದರಿಂದ, ಈ ವಿಷಯವನ್ನು ಅನುಮೋದಿಸಬೇಕೆಂದು ಸಭೆಗೆ ತಿಳಿಸಿದರು. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯ ಮತ್ತು ಆಡಳಿತ ತರಬೇತಿ ಸಂಸ್ಥೆ, ಕರ್ನಾಟಕ ಸರ್ಕಾರ, ಮೈಸೂರು ಇವರೊಂದಿಗೆ MOOCs ಯೋಜನೆಯಡಿ ಆನ್‌ಲೈನ್ ವಿಷಯಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಸಿದ್ಧಪಡಿಸಿರುವ ಪಠ್ಯಕ್ರಮ/ಪರೀಕ್ಷಾ ವಿಧಾನವನ್ನು ಹಾಗೂ ಮುಂದಿನ ದಿನಗಳಲ್ಲಿ ಪೋಲೀಸ್ ತರಬೇತಿ ಕಾಲೇಜಿನವರು ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಆನ್‌ಲೈನ್ ವಿಷಯಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಸಿದ್ಧಪಡಿಸುವ ಪಠ್ಯಕ್ರಮ/ಪರೀಕ್ಷಾ ವಿಧಾನವನ್ನು ಜಾರಿಗೊಳಿಸಲು ಒಪ್ಪಲಾಯಿತು.** |

| | |
|---|---|
| II.21 | ಮೈಸೂರು ವಿಶ್ವವಿದ್ಯಾನಿಲಯದ ಔಟ್‌ರೀಚ್ ಪ್ರೊಗ್ರಾಂಗಳಲ್ಲಿ Lateral Entry ಪ್ರವೇಶಾತಿಯನ್ನು ನೀಡುವ ಬಗ್ಗೆ. |
| | ಕೋವಿಡ್-19, ಸಂಬಂಧ ಅನೇಕ ವಿದ್ಯಾರ್ಥಿಗಳು ಬೇರೆ ದೇಶ, ರಾಜ್ಯ ಹಾಗೂ ಜಿಲ್ಲೆಗಳಿಗೆ ಉನ್ನತ ಶಿಕ್ಷಣಕ್ಕೆ ತೆರಳಿರುವವರು, ಕೋರ್ಸುಗಳು ಪ್ರಾರಂಭಿಸುವ ಮುನ್ನವೆ ಸ್ವಂತ ಸ್ಥಳಗಳಿಗೆ ಬಂದಿರುತ್ತಾರೆ. ಇಂತಹ ವಿದ್ಯಾರ್ಥಿಗಳು ಔಟ್‌ರೀಚ್ ಮತ್ತು Specialized Course ಗಳಿಗೆ ಪ್ರವೇಶಾತಿ ಕೋರಿರುತ್ತಾರೆ. ಈ ಸಂಬಂಧ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲು Lateral Entry ಅಥವಾ Transfer ಅಡಿಯಲ್ಲಿ ಪ್ರವೇಶಾತಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಔಟ್‌ರೀಚ್ ಪ್ರೊಗ್ರಾಂಗಳಲ್ಲಿ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಒಂದು ಬಾರಿ ಮಾತ್ರ ವಿದ್ಯಾರ್ಥಿಗಳು ಕೋರ್ಸುಗಳನ್ನು ಪೂರ್ಣಗೊಳಿಸಲು ಅನುವು ಮಾಡಿಕೊಡುವುದರಿಂದ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುವುದರೊಂದಿಗೆ, ಒಂದು ಪದವಿಯನ್ನು ನೀಡಿದಂತಾಗುತ್ತದೆ, ಆದ್ದರಿಂದ ಮೈಸೂರು ವಿಶ್ವವಿದ್ಯಾನಿಲಯದ ಔಟ್‌ರೀಚ್ ಮತ್ತು Specialized ಪ್ರೊಗ್ರಾಂಗಳಲ್ಲಿ Lateral Entry ಅಥವಾ Transfer ಅಡಿಯಲ್ಲಿ ಪ್ರವೇಶಾತಿಯನ್ನು ನೀಡಲು ಸಭೆಯು ಅನುಮೋದನೆ ನೀಡಬೇಕೆಂದು ಮಾನ್ಯ ಕುಲಪತಿಯವರು ತಿಳಿಸಿದರು. |
| **ತೀರ್ಮಾನ** | **ಮೈಸೂರು ವಿಶ್ವವಿದ್ಯಾನಿಲಯದ ಔಟ್‌ರೀಚ್ ಮತ್ತು Specialized ಪ್ರೊಗ್ರಾಂಗಳಲ್ಲಿ Lateral Entry ಅಥವಾ Transfer ಅಡಿಯಲ್ಲಿ ಪ್ರವೇಶಾತಿಯನ್ನು ನೀಡಲು ಸಭೆಯು ಅನುಮೋದಿಸಿತು.** |
| II.22 | ಮೈಸೂರು ವಿಶ್ವವಿದ್ಯಾನಿಲಯದ ಬೋಧಕ ವೃಂದದ ಬ್ಯಾಕ್‌ಲಾಗ್, ಹೈದರಾಬಾದ್ ಕರ್ನಾಟಕ ಮತ್ತು Current Vacanciesಗಳನ್ನು ಭರ್ತಿ ಮಾಡುವ ಬಗ್ಗೆ. |
| | ಮೈಸೂರು ವಿಶ್ವವಿದ್ಯಾನಿಲಯದ ಬೋಧಕ ವೃಂದದ ಬ್ಯಾಕ್‌ಲಾಗ್, ಹೈದರಾಬಾದ್ ಕರ್ನಾಟಕ ಮತ್ತು ಚಾಲ್ತಿ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಸರ್ಕಾರವು 1:3 ಅನುಪಾತದ ಆಧಾರದ ಮೇಲೆ ಅಭ್ಯರ್ಥಿಗಳನ್ನು ಕೆಇಎ ಮೂಲಕ ನೇಮಕಾತಿ ಮಾಡಿಕೊಳ್ಳಲು ಸೂಚಿಸಿದೆ. ಸಿಂಡಿಕೇಟ್ ಸಭೆಯಲ್ಲಿ ಈ ವಿಷಯವನ್ನು ಅಮೂಲಾಗ್ರವಾಗಿ ಚರ್ಚಿಸಿ 1:3 ಬದಲು 1:10 ಅನುಪಾತದ ಆಧಾರದಲ್ಲಿ ನೇಮಕ ಮಾಡಿಕೊಳ್ಳುವ ಬಗೆಗೆ ಸರ್ಕಾರಕ್ಕೆ ಪತ್ರವನ್ನು ಬರೆಯಬೇಕೆಂದು ತಿಳಿಸಿರುವುದರಿಂದ ಸರ್ಕಾರಕ್ಕೆ ಪತ್ರವನ್ನು ಬರೆಯಲಾಗುವುದೆಂದು ಸಭೆಯ ಗಮನಕ್ಕೆ ಮಾನ್ಯ ಕುಲಪತಿಗಳು ತಂದರು.<br>ಪ್ರೊ.ಜಿ, ವೆಂಕಟೇಶ್‌ಕುಮಾರ್, ಡೀನರು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ಮಾನಸಗಂಗೋತ್ರಿ, ಮೈಸೂರು ಇವರು ಮಾತನಾಡಿ, ಈ ನಿಟ್ಟಿನಲ್ಲಿ ಸಮಾಜ ಕಲ್ಯಾಣ ಇಲಾಖೆಯು ಈಗಾಗಲೇ ಗುರುತಿಸಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಬಾರದೆಂದು ಕೋರಿದರು.<br>ಸಮಾಜ ಕಲ್ಯಾಣ ಇಲಾಖೆಯು ಈ ಹಿಂದೆ 54 ಹುದ್ದೆಗಳನ್ನು ಗುರುತಿಸಿದ್ದು, ಪ್ರಸ್ತುತ 76 ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಿರುತ್ತದೆ. ಸಮಾಜ ಕಲ್ಯಾಣ ಇಲಾಖೆಯು ವಿಷಯವಾರು ಹಂಚಿಕೆ ಮಾಡಿರುವ ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡುವುದಿಲ್ಲವೆಂದು ಮಾನ್ಯ ಕುಲಪತಿಯವರು ತಿಳಿಸಿದರು. ಉಳಿದಂತೆ ನಿಯಮಾನುಸಾರ ಕ್ರಮ ವಹಿಸಲಾಗುವುದು ಎಂದರು. |
| **ತೀರ್ಮಾನ** | **ಮೈಸೂರು ವಿಶ್ವವಿದ್ಯಾನಿಲಯದ ಬೋಧಕ ವೃಂದದ ಬ್ಯಾಕ್‌ಲಾಗ್, ಹೈದರಾಬಾದ್ ಕರ್ನಾಟಕ ಮತ್ತು Current Vacanciesಗಳನ್ನು ಭರ್ತಿ ಮಾಡುವ ಕರಡು ಪರಿನಿಯಮಾವಳಿಯನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಿಕೊಡಲು ಸಭೆಯು ಅನುಮೋದಿಸಿತು..** |
| II.23 | University of Mysore Online Programmes – reg... |
| | ಎನ್‌ಐಆರ್‌ಎಫ್ ರ್‍ಯಾಂಕಿಂಗ್‌ನಲ್ಲಿ ಮೈಸೂರು ವಿಶ್ವವಿದ್ಯಾನಿಲಯವು 27ನೇ ರ್‍ಯಾಂಕ್ ಪಡೆದಿರುತ್ತದೆ. ಈ ಸ್ಥಾನ ಪಡೆಯಲು ಕಾರಣರಾದ ವಿಶ್ವವಿದ್ಯಾನಿಲಯದ ಅಧಿಕಾರಿಗಳು, ಅಧ್ಯಾಪಕರು/ಅಧ್ಯಾಪಕೇತರರು, ಸಂಶೋಧಕರು ಮತ್ತು ವಿದ್ಯಾರ್ಥಿಗಳಿಗೆ ಮಾನ್ಯ ಕುಲಪತಿಯವರು ಧನ್ಯವಾದಗಳನ್ನು ಅರ್ಪಿಸಿದರು.<br>ಮುಂದುವರೆದು ಮಾತನಾಡಿ, ಯುಜಿಸಿ ನಿರ್ದೇಶನದ ಮೇರೆಗೆ ಈ ಹಿಂದೆ ಆನ್‌ಲೈನ್ ಕೋರ್ಸ್ ಸ್ಥಗಿತಗೊಳಿಸಲಾಯಿತು. ಎನ್‌ಐಆರ್‌ಎಫ್ ರ್‍ಯಾಂಕಿಂಗ್‌ನಲ್ಲಿ 100ರೊಳಗೆ ಸ್ಥಾನ ಪಡೆದ |

| | |
|---|---|
| | ವಿಶ್ವವಿದ್ಯಾನಿಲಯಗಳು ಅನ್‌ಲೈನ್ ಕೋರ್ಸ್ ಆರಂಭಿಸಲು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ, ನವದೆಹಲಿ ಅವರ ಅನುಮೋದನೆ ಅಗತ್ಯವಿರುವುದಿಲ್ಲವೆಂದು ಯುಜಿಸಿ ಅಧ್ಯಕ್ಷರು ತಿಳಿಸಿರುವ ಹಿನ್ನೆಲೆಯಲ್ಲಿ, ಮೈಸೂರು ವಿದ್ಯಾವಿದ್ಯಾನಿಲಯವು ಪ್ರತಿಷ್ಠಿತ ವಿಶ್ವವಿದ್ಯಾನಿಲಯವಾಗಿದ್ದು, ಅನ್‌ಲೈನ್ ಕೋರ್ಸ್ ಪ್ರಾರಂಭಿಸುವುದರಿಂದ ಮೊದಲನೆಯದಾಗಿ ಪ್ರಪಂಚದ ಎಲ್ಲಾ ಮೂಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ನೀಡಿದಂತಾಗುತ್ತದೆ, ಎರಡನೆಯದಾಗಿ ವಿಶ್ವವಿದ್ಯಾನಿಲಯಕ್ಕೆ ಆದಾಯವು ಬರುತ್ತದೆಂದು ತಿಳಿಸಿದರು.<br><br>ಪ್ರಸ್ತುತ Online Programmes ನಲ್ಲಿ 6000 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದು, ಸದ್ಯಕ್ಕೆ 10 ಕೋರ್ಸುಗಳು ಯಶಸ್ವಿಯಾಗಿ ನಡೆಯುತ್ತಿರುತ್ತವೆ. ಮುಂದಿನ ದಿನಗಳಲ್ಲಿ ಗಣಕ ವಿಜ್ಞಾನ ಅಧ್ಯಯನ ವಿಭಾಗದ ತಂತ್ರಜ್ಞಾನ ಬಳಸಿಕೊಂಡು Platform ಮಾಡಿ, ಅನ್‌ಲೈನ್ ತರಗತಿಗಳು ತೆಗೆದುಕೊಳ್ಳಲು ಪ್ರತ್ಯೇಕವಾಗಿ ಅಧ್ಯಾಪಕರುಗಳನ್ನು ನೇಮಕ ಮಾಡುವ ಮೂಲಕ Online Programmes ಸುಸೂತ್ರವಾಗಿ ನಡೆಯಲು ಕ್ರಮ ವಹಿಸಲಾಗುವುದು. ಸದ್ಯಕ್ಕೆ ವಿಶ್ವವಿದ್ಯಾನಿಲಯದಲ್ಲಿ Online Programmes ನಡೆಸಲು ಸಭೆಯು ಅನುಮೋದನೆ ನೀಡಬೇಕೆಂದು ಮಾನ್ಯ ಕುಲಪತಿಯವರು ತಿಳಿಸಿದರು. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದಲ್ಲಿ Online Programmes ನಡೆಸಲು ಸಭೆಯು ಅನುಮೋದಿಸಿತು.** |
| II.24 | MCA ಕೋರ್ಸಿನ ಅವಧಿಯನ್ನು 03 ವರ್ಷಗಳಿಂದ 02 ವರ್ಷಗಳಿಗೆ ಕಡಿತಗೊಳಿಸಿರುವ ಸಂಬಂಧ ಪಠ್ಯಕ್ರಮವನ್ನು ಸಿದ್ದಪಡಿಸಿರುವ ಬಗ್ಗೆ. |
| | MCA ಕೋರ್ಸಿನ ಅವಧಿಯನ್ನು **AICTE ಅನುಮೋದನಾ ಪ್ರಕ್ರಿಯೆ ಕೈಪಿಡಿ 2020-21 ರನ್ವಯ** ಸದರಿ ಕೋರ್ಸಿನ ಅವಧಿಯನ್ನು 03 ವರ್ಷಗಳಿಂದ 02 ವರ್ಷಗಳಿಗೆ ಕಡಿತಗೊಳಿಸಿರುವ ಸಂಬಂಧ ಪಠ್ಯಕ್ರಮವನ್ನು ಸಿದ್ದಪಡಿಸಿರುವುದನ್ನು ಶೈಕ್ಷಣಿಕ ಸಭೆಯು ಅನುಮೋದಿಸಬಹುದೆಂದು ಮಾನ್ಯ ಕುಲಪತಿಯವರು ತಿಳಿಸಿದರು. |
| ತೀರ್ಮಾನ | **MCA ಕೋರ್ಸಿನ 03 ವರ್ಷಗಳ ಅವಧಿಯನ್ನು AICTEಯು 02 ವರ್ಷಗಳ ಅವಧಿಗೆ ಕಡಿತಗೊಳಿಸಿರುವ ಸಂಬಂಧ ಸಿದ್ದಪಡಿಸಿರುವ ಪಠ್ಯಕ್ರಮವನ್ನು ಸಭೆಯು ಅನುಮೋದಿಸಿತು.** |
| III.1 | ದಿನಾಂಕ 17-02-2020ರಂದು ನಡೆದ ಕಲಾ ನಿಕಾಯ ಸಭೆಯ ನಡವಳಿಯ ಅನುಮೋದನೆ ಬಗ್ಗೆ. |
| ತೀರ್ಮಾನ | **ದಿನಾಂಕ 17-02-2020ರಂದು ನಡೆದ ಕಲಾ ನಿಕಾಯದ ವಾರ್ಷಿಕ ಸಭೆಯ ನಡವಳಿಯನ್ನು ಸಭೆಯು ಅನುಮೋದಿಸಿತು.** |
| III.2 | ದಿನಾಂಕ 18-02-2020ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಸಭೆಯ ನಡವಳಿಯ ಅನುಮೋದನೆಗಾಗಿ. |
| | ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರಾದ ಪ್ರೊ.ಜಿ.ವೆಂಕಟೇಶಕುಮಾರ್‌ರವರು ಮಾತನಾಡಿ, ನಿಕಾಯದ ಸಭೆಯು ನಂತರ ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ (Criminology and Forensic Science) ಹಾಗೂ ಗಣಕ ವಿಜ್ಞಾನ ವಿಭಾಗಗಳಿಂದ ಕೆಲವು ಪಠ್ಯಕ್ರಮಗಳು ಮಾರ್ಪಾಡಾಗಿರುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಇದನ್ನು ಶೈಕ್ಷಣಿಕ ಮಂಡಳಿಯು ಅನುಮೋದಿಸಿದರೆ ಸೂಕ್ತವೆಂದು ತಿಳಿಸಿದರು.<br><br>ಈ ಸಂಬಂಧ ಮಾತನಾಡಿದ ಮಾನ್ಯ ಕುಲಪತಿಗಳು ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ (Criminology and Forensic Science) ಹಾಗೂ ಗಣಕ ವಿಜ್ಞಾನ ಅಧ್ಯಯನ ಮಂಡಳಿಯು ಮಾರ್ಪಾಡು ಮಾಡಿರುವ ಪಠ್ಯಕ್ರಮಗಳನ್ನು ಸಭೆಯು ಅನುಮೋದಿಸಿದರೆ, ಪ್ರಸಕ್ತ ಸಾಲಿನಿಂದಲೇ ಪರಿಷ್ಕೃತ ಪಠ್ಯಕ್ರಮಗಳನ್ನು ಜಾರಿಗೆ ತರಲು ಅನುಕೂಲವಾಗುತ್ತದೆಂದು ತಿಳಿಸಿದರು. |
| ತೀರ್ಮಾನ | **ದಿನಾಂಕ 18-02-2020ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ವಾರ್ಷಿಕ ಸಭೆಯ ನಡವಳಿಯನು ಹಾಗೂ ಇದರೊಂದಿಗೆ ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ (Criminology and** |

| | |
|---|---|
| | **Forensic Science) ಹಾಗೂ ಗಣಕ ವಿಜ್ಞಾನ ಅಧ್ಯಯನ ಮಂಡಳಿಯು ಮಾರ್ಪಾಡು ಮಾಡಿರುವ ಪಠ್ಯಕ್ರಮಗಳನ್ನು ಪ್ರಸಕ್ತ ಸಾಲಿನಿಂದಲೇ ಜಾರಿಗೆ ತರಲು ಸಭೆಯು ಅನುಮೋದಿಸಿತು.** |
| III.3 | Specialized ಕೋರ್ಸುಗಳ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ಶಿಫಾರಸ್ಸು ನಿರ್ಣಯಗಳ ಬಗ್ಗೆ. |
| ತೀರ್ಮಾನ | **Specialized ಕೋರ್ಸುಗಳ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ಶಿಫಾರಸ್ಸು ನಿರ್ಣಯಗಳನ್ನು ಸಭೆಯು ಅನುಮೋದಿಸಿತು.** |
| III.4 | ದಿನಾಂಕ 20-02-2020ರಂದು ನಡೆದ ವಾಣಿಜ್ಯ ನಿಕಾಯ ಸಭೆಯ ನಡವಳಿ ಅನುಮೋದನೆ ಬಗ್ಗೆ. |
| ತೀರ್ಮಾನ | **ದಿನಾಂಕ 20-02-2020ರಂದು ನಡೆದ ವಾಣಿಜ್ಯ ನಿಕಾಯ ವಾರ್ಷಿಕ ಸಭೆಯ ನಡವಳಿಯನ್ನು ಅನುಮೋದಿಸಲಾಯಿತು.** |
| III.5 | Specialized ಕೋರ್ಸುಗಳ ವಾಣಿಜ್ಯ ನಿಕಾಯ ಸಭೆಯ ಶಿಫಾರಸ್ಸು ನಿರ್ಣಯಗಳ ಬಗ್ಗೆ. |
| ತೀರ್ಮಾನ | **Specialized ಕೋರ್ಸುಗಳ ವಾಣಿಜ್ಯ ನಿಕಾಯ ಸಭೆಯ ಶಿಫಾರಸ್ಸು ನಿರ್ಣಯಗಳನ್ನು ಸಭೆಯು ಅನುಮೋದಿಸಿತು.** |
| III.6 | ದಿನಾಂಕ 19-02-2020ರಂದು ನಡೆದ ಶಿಕ್ಷಣ ನಿಕಾಯ ಸಭೆಯ ನಡವಳಿ ಅನುಮೋದನೆ ಬಗ್ಗೆ. |
| ತೀರ್ಮಾನ | **ದಿನಾಂಕ 19-02-2020ರಂದು ನಡೆದ ಶಿಕ್ಷಣ ನಿಕಾಯ ಸಭೆಯ ನಡವಳಿಯನ್ನು ಅನುಮೋದಿಸಲಾಯಿತು.** |
| III.7 | ದಿನಾಂಕ 20-02-2020ರಂದು ನಡೆದಂತಹ ಕಾನೂನು ನಿಕಾಯದ ಸಭೆಯ ನಡವಳಿಯ ಅನುಮೋದನೆ ಬಗ್ಗೆ. |
| | ಕಾನೂನು ನಿಕಾಯದ ಡೀನರಾದ ಪ್ರೊ.ರಮೇಶ್‌ರವರು ಮಾತನಾಡಿ, ಕಾನೂನು ನಿಕಾಯದ ವಿಷಯ ಸಂಖ್ಯೆ: 1.1 ಅನ್ನು ಗಮನಿಸಿದರೆ ಅಧ್ಯಯನ ಮಂಡಳಿ ಸಭೆಯಲ್ಲಿ ಸೀಟುಗಳನ್ನು ಹಂಚಿಕೆ ಮಾಡುವ ತೀರ್ಮಾನ ಕೈಗೊಂಡು ನಿಕಾಯ ಸಭೆಗೆ ತರುವುದು ಸೂಕ್ತವಲ್ಲ. ಅಧ್ಯಯನ ಮಂಡಳಿಯು ತೆಗೆದುಕೊಳ್ಳುವ ನಿರ್ಣಯವು ಶೈಕ್ಷಣಿಕ ವಿಷಯಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಆದರೆ, ಕರ್ನಾಟಕದ ಹೊರಗಿನ ವಿದ್ಯಾರ್ಥಿಗಳಿಗೆ 50% ಸೀಟುಗಳನ್ನು ಹಂಚಿಕೆ ಮಾಡಿದರೆ, ಸ್ಥಳೀಯ ಕರ್ನಾಟಕದ ವಿದ್ಯಾರ್ಥಿಗಳಿಗೆ ಸಾಮಾಜಿಕ ನ್ಯಾಯ ಸಿಗುವುದಿಲ್ಲವೆಂದು ಪ್ರಸ್ತಾಪಿಸಿದರು.<br><br>ಈ ಸಂಬಂಧ ಮಾತನಾಡಿದ ಮಾನ್ಯ ಕುಲಪತಿಯವರು ಇದು ಆಡಳಿತಾತ್ಮಕ ವಿಷಯವಾಗಿರುವುದರಿಂದ ಒಂದು ಸಮಿತಿ ರಚಿಸಲಾಗುವುದು. ಸಮಿತಿ ಸಭೆಯಲ್ಲಿ ಯಾವ ಕೋರ್ಸುಗಳಿಗೆ ಸೀಟುಗಳ ಹಂಚಿಕೆ ಮಾಡಬಹುದು, ಯಾವ ಕೋರ್ಸುಗಳಿಗೆ ಸೀಟುಗಳನ್ನು ಹಂಚಿಕೆ ಮಾಡಬಾರದೆಂದು ತಿಳಿಸಲಾಗುವುದು. ಏನೇ ಬದಲಾವಣೆ ಮಾಡಿದರೂ ಎಲ್ಲಾ ವಿದ್ಯಾರ್ಥಿಗಳಿಗೂ ಸಾಮಾಜಿಕ ನ್ಯಾಯ ಸಲ್ಲಬೇಕು ಎಂದು ಅಭಿಪ್ರಾಯಪಟ್ಟರು. |
| ತೀರ್ಮಾನ | **ದಿನಾಂಕ 20-02-2020ರಂದು ನಡೆದಂತಹ ಕಾನೂನು ನಿಕಾಯದ ವಾರ್ಷಿಕ ಸಭೆಯ ನಡವಳಿಯಲ್ಲಿ ವಿಷಯ ಸಂಖ್ಯೆ: 1.1 ರ ವಿಷಯವು ಆಡಳಿತಾತ್ಮಕ ವಿಷಯವಾಗಿರುವುದರಿಂದ ಇದನ್ನು ಹೊರತುಪಡಿಸಿ ಇನ್ನೆಲ್ಲಾ ನಡವಳಿಯನ್ನು ಅನುಮೋದಿಸಲಾಯಿತು.** |
| | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ M.Sc Yogic Science ಕೋರ್ಸ್ ಪ್ರಾರಂಭಿಸಿದ್ದು, ಅದರಲ್ಲಿ 06 ವಿದ್ಯಾರ್ಥಿಗಳು ಮಾತ್ರ ಪ್ರವೇಶಾತಿ ಪಡೆದಿದ್ದರು. ಈ ಕೋರ್ಸಿಗೆ ವಿದೇಶಿ ವಿದ್ಯಾರ್ಥಿಗಳಿಂದ ಬೇಡಿಕೆ ಇರುವುದರಿಂದ ಎಂ.ಎಸ್ಸಿ ಕೋರ್ಸಿನೊಂದಿಗೆ ಡಿಪ್ಲೊಮ, ಪಿಜಿ ಡಿಪ್ಲೊಮ ಮತ್ತು ಸರ್ಟಿಫಿಕೇಟ್ ಕೋರ್ಸುಗಳನ್ನು ಪ್ರಾರಂಭಿಸಿದ್ದರೆ ಅನುಕೂಲವೆಂದು ವಿದೇಶಿ ವಿದ್ಯಾರ್ಥಿಗಳು ತಿಳಿಸಿರುವ ಹಿನ್ನೆಲೆಯಲ್ಲಿ, ಪ್ರಸ್ತುತ ಪಠ್ಯಕ್ರಮವನ್ನು ಮಾರ್ಪಾಡು ಮಾಡಿ ಸ್ನಾತಕೋತ್ತರ ಪದವಿಯೊಂದಿಗೆ ಡಿಪ್ಲೊಮ, ಪಿಜಿ ಡಿಪ್ಲೊಮ ಮತ್ತು ಸರ್ಟಿಫಿಕೇಟ್ ಕೋರ್ಸುಗಳನ್ನು ಪ್ರಾರಂಭಿಸಲು ಸಭೆಯು ಅನುಮತಿ ನೀಡಬೇಕೆಂದು ಮಾನ್ಯ ಕುಲಪತಿಗಳು ತಿಳಿಸಿದರು. |
| ತೀರ್ಮಾನ | **Yogic Science ಕೋರ್ಸ್‌ನ್ನು ಸ್ನಾತಕೋತ್ತರ ಪದವಿಯೊಂದಿಗೆ ಡಿಪ್ಲೊಮ, ಪಿಜಿ ಡಿಪ್ಲೊಮ ಮತ್ತು ಸರ್ಟಿಫಿಕೇಟ್ ಕೋರ್ಸುಗಳನ್ನ ಪ್ರಾರಂಭಿಸಲು ಸಭೆಯು ಅನುಮೋದಿಸಿತು.** |

| | |
|---|---|
| | M.A in Tribal Development ಕೋರ್ಸ್‌ಅನ್ನು ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ ಪ್ರಾರಂಭಿಸಲಾಗಿತ್ತು. ಸದರಿ ಕೋರ್ಸ್‌ಗೆ ನಿಗಧಿತ ಅರ್ಜಿಗಳು ಬಾರದಿದ್ದ ಕಾರಣ, ಈ ಕೋರ್ಸ್ ಅನ್ನು ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರಕ್ಕೆ ವರ್ಗಾಯಿಸಲಾಗಿದೆ. ಏಕೆಂದರೆ ಚಾಮರಾಜನಗರದಲ್ಲಿ NGO's ಮತ್ತು ಬುಡಕಟ್ಟು ಪ್ರದೇಶಗಳು ಹೆಚ್ಚಾಗಿರುವುದರಿಂದ, ಸದರಿ ಕೋರ್ಸಿಗೆ ಹೆಚ್ಚಿನ ಅರ್ಜಿಗಳು ಬರಬಹುದೆಂದು ಮಾನ್ಯ ಕುಲಪತಿಯವರು ಸಭೆಯಲ್ಲಿ ಪ್ರಸ್ತಾಪಿಸಿದರು.<br><br>ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಡೀನರಾದ ಪ್ರೊ.ಜಿ.ವೆಂಕಟೇಶಕುಮಾರ್ ಮಾತನಾಡಿ, M.A in Tribal Development ಕೋರ್ಸು ಮೈಸೂರು ವಿಶ್ವವಿದ್ಯಾನಿಲಯದಲ್ಲಿದ್ದರೂ, ಕೋರ್ಸಿನ ಬಗ್ಗೆ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳು ಪ್ರವೇಶಾತಿಗೆ ಅರ್ಜಿಯನ್ನು ಸಲ್ಲಿಸುತ್ತಾರೆ. ಆದ್ದರಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಇನ್ನೊಂದು ಅವಕಾಶ ಕೊಡಬಹುದು. ಒಂದು ವೇಳೆ ಹೆಚ್ಚು ಅರ್ಜಿಗಳು ಬಾರದಿದ್ದರೆ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರಕ್ಕೆ ವರ್ಗಾಯಿಸುವ ಕ್ರಮ ತೆಗೆದುಕೊಳ್ಳಬಹುದೆಂದು ತಿಳಿಸಿದರು.<br><br>ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು M.A in Tribal Development ಕೋರ್ಸು ಅನ್ನು ಪ್ರಸಕ್ತ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಕ್ಯಾಂಪಸ್ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಎರಡರಲ್ಲೂ ಪ್ರಾರಂಭಿಸುವುದು. ವಿದ್ಯಾರ್ಥಿಗಳು ಎಲ್ಲಿ ಹೆಚ್ಚು ಅರ್ಜಿಯನ್ನು ಸಲ್ಲಿಸುತ್ತಾರೆಯೋ, ಅಲ್ಲಿ ಸದರಿ ಕೋರ್ಸ್‌ನ್ನು ಪ್ರಾರಂಭಿಸುವುದು. ಕಡಿಮೆ ಅರ್ಜಿ ಸಲ್ಲಿಕೆಯಾದಲ್ಲಿ ಸದರಿ ಕೋರ್ಸ್ ಅನ್ನು ರದ್ದುಪಡಿಸಲಾಗುವುದೆಂದು ತಿಳಿಸಿದರು. |
| ತೀರ್ಮಾನ | **M.A in Tribal Development ಕೋರ್ಸು ಅನ್ನು ಪ್ರಸಕ್ತ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಎರಡರಲ್ಲೂ ಪ್ರಾರಂಭಿಸುವುದು. ವಿದ್ಯಾರ್ಥಿಗಳು ಎಲ್ಲಿ ಹೆಚ್ಚು ಅರ್ಜಿಯನ್ನು ಸಲ್ಲಿಸುತ್ತಾರೆಯೋ, ಅಲ್ಲಿ ಸದರಿ ಕೋರ್ಸ್‌ನ್ನು ಪ್ರಾರಂಭಿಸುವುದು. ಕಡಿಮೆ ಅರ್ಜಿ ಸಲ್ಲಿಕೆಯಾದಲ್ಲಿ ಸದರಿ ಕೋರ್ಸ್ ಅನ್ನು ರದ್ದುಪಡಿಸಲು ಸಭೆಯು ಅನುಮೋದಿಸಿತು.** |

ಇತರೆ ವಿಷಯಗಳು:

1) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಲಾ, ವಾಣಿಜ್ಯ, ವಿಜ್ಞಾನ ಮತ್ತು ತಂತ್ರಜ್ಞಾನ, ಶಿಕ್ಷಣ ಮತ್ತು ಕಾನೂನು ನಿಕಾಯಗಳಿದ್ದು, ಶೈಕ್ಷಣಿಕ ಸಂಬಂಧ ಚರ್ಚೆ ನಡೆಸಲು ಮಾನಸಗಂಗೋತ್ರಿಯಲ್ಲಿ ಒಂದು ಡೀನರ ಕಛೇರಿ ಮಾಡಿಕೊಡಬೇಕೆಂದು ಎಲ್ಲಾ ನಿಕಾಯದ ಪರವಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಡೀನರಾದ ಪ್ರೊ.ಜಿ.ವೆಂಕಟೇಶಕುಮಾರ್ ಮಾನ್ಯ ಕುಲಪತಿಯವರಲ್ಲಿ ವಿನಂತಿಸಿದರು. ಈ ಸಂಬಂಧ ಮಾತನಾಡಿದ ಮಾನ್ಯ ಕುಲಪತಿಯವರು ಮುಂದಿನ ದಿನಗಳಲ್ಲಿ ಸದರಿ ಪ್ರಸ್ತಾವನೆಗೆ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

2) ಪ್ರೊ. ಶಿವಬಸವಯ್ಯ, ನಿರ್ದೇಶಕರು, ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿರುವ ಬಹುತೇಕ ಕೋರ್ಸುಗಳಿಗೆ ಪ್ರವೇಶಾತಿ ಅರ್ಜಿ ಸಲ್ಲಿಸಬೇಕಾದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ 40 ಅಂಕಗಳನ್ನು ಮತ್ತು ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ 45 ಅಂಕಗಳನ್ನು ನಿಗಧಿಪಡಿಸಲಾಗಿರುತ್ತದೆ. ಆದರೆ, ಇಂಗ್ಲಿಷ್ ವಿಷಯಕ್ಕೆ ಮಾತ್ರ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ 45 ಅಂಕಗಳನ್ನು ಮತ್ತು ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ 50 ಅಂಕಗಳನ್ನು ನಿಗಧಿಪಡಿಸಿದೆ. ಗ್ರಾಮೀಣ ಪ್ರದೇಶದಲ್ಲಿ ಅದರಲ್ಲೂ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವ ಅಂಕವು ಹೆಚ್ಚಾಗಿರುವುದರಿಂದ, ವರ್ಷದಿಂದ ವರ್ಷಕ್ಕೆ ಇಂಗ್ಲಿಷ್ ವಿಷಯದ ವಿದ್ಯಾರ್ಥಿಗಳ ಪ್ರವೇಶಾತಿಯು ಕುಂಠಿತಗೊಳ್ಳುತ್ತಿದೆ. ಆದ್ದರಿಂದ ಪ್ರಸಕ್ತ ಸಾಲಿನಿಂದ ಇಂಗ್ಲಿಷ್ ಕೋರ್ಸಿನ ಪ್ರವೇಶಾತಿಗೆ ಅರ್ಜಿ ಸಲ್ಲಿಸಲು

ಪಜಾ/ಪವ ವಿದ್ಯಾರ್ಥಿಗಳಿಗೆ 40 ಅಂಕಗಳನ್ನು ಮತ್ತು ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ 45 ಅಂಕಗಳನ್ನು ನಿಗಧಿಪಡಿಸಬೇಕೆಂದು ಕೋರಿದರು.

ಇದಕ್ಕೆ ಸ್ಪಂದಿಸಿದ ಮಾನ್ಯ ಕುಲಪತಿಯವರು ಸದರಿ ಪ್ರಸ್ತಾವನೆಯನ್ನು ಸಮಿತಿಯು ಈಗಾಗಲೇ ಶಿಫಾರಸ್ಸು ಮಾಡಲಾಗಿದ್ದು, ಈ ಪ್ರಸ್ತಾವನೆಗೆ ಶೈಕ್ಷಣಿಕ ಮಂಡಳಿಯು ಅನುಮೋದಿಸಿದರೆ, ಪ್ರಸಕ್ತ ಸಾಲಿನಿಂದಲೇ ಈ ನಿಯಮವನ್ನು ಜಾರಿಗೊಳಿಸಲಾಗುವುದೆಂದು ತಿಳಿಸಿದರು.

**ತೀರ್ಮಾನ:** **2020-21ನೇ ಶೈಕ್ಷಣಿಕ ಸಾಲಿನಲ್ಲಿ ಇಂಗ್ಲಿಷ್ ವಿಷಯಕ್ಕೆ ಪ್ರವೇಶಾತಿ ಅರ್ಜಿ ಸಲ್ಲಿಸುವ ಪಜಾ/ಪವ ವಿದ್ಯಾರ್ಥಿಗಳಿಗೆ 40 ಅಂಕಗಳನ್ನು ಮತ್ತು ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ 45 ಅಂಕಗಳನ್ನು ನಿಗಧಿಪಡಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಲಾಯಿತು.**

ಕೊನೆಯಲ್ಲಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

**ಸಹಿ/-**
**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ**

**ಸಹಿ/-**
**ಕುಲಪತಿಗಳು ಹಾಗೂ ಅಧ್ಯಕ್ಷರು**